# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
## ಕರ್ನಾಟಕ

**ಮಾನ್ಯ ಸಂಪಾದಕರೆ ಹಾಗೂ ಮಾಧ್ಯಮ ಪ್ರತಿನಿಧಿಗಳೆ,**
**ಹೋರಾಟದ ಶುಭಾಶಯಗಳು.**

ಕರ್ನಾಟಕದಲ್ಲಿ ಚುನಾವಣೆ ಘೋಷಣೆಯಾಗಿರುವ ಹಿನ್ನಲೆಯಲ್ಲಿ ನಮ್ಮ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ತಾವುಗಳು ಇದನ್ನು ಪರಿಗಣಿಸಿ ಆದ್ಯತಾ ರೀತ್ಯಾ ಪ್ರಕಟಿಸಬೇಕೆಂದು ಕೋರುತ್ತಿದ್ದೇವೆ.

**ಹೋರಾಟದಲ್ಲಿ ತಮ್ಮೊಂದಿಗೆ,**

**ಗಂಗಾಧರ**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**16 ಏಪ್ರಿಲ್, 2008**

---

ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ, ಬಡವರಿಗೆ ಬಣ್ಣದ ಟಿ.ವಿ, ಉಚಿತ ವಿದ್ಯುತ್, ರೈತರ ಸಾಲಮನ್ನಾ, ಶೇಕಡಾ 3ರ ಬಡ್ಡಿದರದಲ್ಲಿ ಸಾಲಸೌಲಭ್ಯ, 1200 ರೂಪಾಯಿಗಳ ಶಿಷ್ಯ ವೇತನ, 15 ಲಕ್ಷಗಳಷ್ಟು ಬಡವರಿಗಾಗಿ ಮನೆ, ತಿಂಗಳಿಗೆ ಪ್ರತಿ ಕುಟುಂಬಕ್ಕೆ 25 ಕೆ.ಜಿ. ಅಕ್ಕಿ ಇತ್ಯಾದಿಗಳು ಕರ್ನಾಟಕದ ಜನರಿಗೆ ಸಿಗಲಿದೆ. ಆಗಸದತ್ತ ಸಾಗುತ್ತಿರುವ ಬೆಲೆಯೇರಿಕೆ, ಹಣದುಬ್ಬರ, ಆತ್ಮಹತ್ಯೆಗಳ ನಡುವೆ ಇಂತಹ ವಾರ್ತೆ ಯಾರಿಗೆ ತಾನೆ ಖುಷಿ ನೀಡುವುದಿಲ್ಲ! ಇವಿಷ್ಟೇ ಅಲ್ಲ, ಇನ್ನೂ ಹಲವಾರು ಇಂತಹ ಜನಸಾಮಾನ್ಯರ ಪರ ಯೋಜನೆಗಳು ಬರಲಿವೆಯಂತೆ. ಇದೇನು ಸಾಮಾಜಿಕ ಬದಲಾವಣೆ ಬಂದುಬಿಟ್ಟಿದೆ ಎನಿಸುತ್ತಿದೆಯೇ! ಖಂಡಿತಾ ಅಲ್ಲ. ಇವೆಲ್ಲಾ ಜನರನ್ನು ಮರಳುಗೊಳಿಸುತ್ತಾ ದೇಶದ ಆಸ್ತಿ ಸಂಪತ್ತುಗಳನ್ನು ಹಿಡಿದಿಟ್ಟುಕೊಳ್ಳುವ ಬಹುಸಂಖ್ಯಾತ ಜನಸಾಮಾನ್ಯರ ಮೇಲೆ ನಿರಂಕುಶಾಧಿಕಾರ ಚಲಾಯಿಸುವ ಕುತಂತ್ರಗಳ ಭಾಗವಾದ ಕಪಟ ಚುನಾವಣೆಯ ಕೆಲವು ಮಾದರಿಗಳ ಮುಂದುವರಿಕೆಯಾಗಿದೆ. 5 ವರ್ಷದೊಳಗೆ ಮತ್ತೊಮ್ಮೆ ಕರ್ನಾಟಕದ ಜನಸಾಮಾನ್ಯರು ಇದನ್ನು ನೋಡುವ ಅವಕಾಶ ಸಿಕ್ಕಿದೆ!

ಕಳೆದ 2004ರಿಂದ ಇಲ್ಲೀವರೆಗೆ ಕರ್ನಾಟಕದಲ್ಲಿ ಮೂರು ಸಮ್ಮಿಶ್ರ ಸರ್ಕಾರಗಳು ಅಸ್ತಿತ್ವಕ್ಕೆ ಬಂದು ಉರುಳಿ ಹೋಗಿವೆ. ಈಗ 6 ತಿಂಗಳಿನಿಂದ ಕೇಂದ್ರಾಡಳಿತ ಜಾರಿಯಲ್ಲಿದೆ. ಈ ಎಲ್ಲಾ ಸರ್ಕಾರಗಳು ಕರ್ನಾಟಕದ ಜನರಿಗೆ ನೂರೆಂಟು ಆಶ್ವಾಸನೆಗಳನ್ನು ನೀಡಿದ್ದವು. ನೂರಾರು ಭರವಸೆಗಳನ್ನು ನೀಡಿದ್ದವು. ಚುನಾವಣೆಗಳಿಗೆ ಮೊದಲು ಕೂಡ ಎಲ್ಲಾ ರಾಜಕೀಯ ಪಕ್ಷಗಳು ಭಾರಿ ಆಶ್ವಾಸನೆಗಳು ಹಾಗೂ ಭರವಸೆಗಳನ್ನು ನೀಡಿದ್ದವು. ಹಾಗಿದ್ದಾಗಲೂ ಕರ್ನಾಟಕದ ಜನರು ಯಾರ ಮೇಲೂ ವಿಶ್ವಾಸ ತೋರಿಸಿರಲಿಲ್ಲ. ಯಾವುದೇ ಪಕ್ಷಕ್ಕೂ ಬಹುಮತ ನೀಡಿರಲಿಲ್ಲ. ಹಾಗಿದ್ದರೂ ಅವಕಾಶವಾದಿ ವಿಧಾನ ಹಾಗೂ ಅಧಿಕಾರ ದಾಹದಿಂದ ಸರ್ಕಾರ ರಚಿಸಿಕೊಂಡಿದ್ದರು. ಹಾಗೆ ಅಧಿಕಾರಕ್ಕೆ ಬಂದ ಧರ್ಮ್‌ಸಿಂಗ್ ಸರ್ಕಾರ ಆಳುವ ವರ್ಗಗಳ ತೊತ್ತಾಗಿ ಕಾರ್ಯಾಚರಿಸುತ್ತಾ ಕರ್ನಾಟಕದ ನೆಲ, ಜಲ, ಸಂಪತ್ತುಗಳನ್ನು ಸಾಮ್ರಾಜ್ಯಶಾಹಿ ಕಂಪೆನಿಗಳಿಗೆ ಒಪ್ಪಿಸುವ ಕಾರ್ಯವನ್ನು ಯಾವುದೇ ತಡೆಯಿಲ್ಲದೆ ಭರದಿಂದ ನಡೆಸಿತು. ಜನರನ್ನು ಒಕ್ಕಲೆಬ್ಬಿಸಿ ಬೀದಿಪಾಲು ಮಾಡುವುದು, ಜನರ ತುಂಡುಭೂಮಿ ಗುಡಿಸಲುಗಳನ್ನು ವಶಪಡಿಸಿಕೊಳ್ಳುವುದು, ಹಿಂದೂ ಫ್ಯಾಸಿಸಂ ಜೊತೆ ಕೈಜೋಡಿಸುವುದು, ಇವುಗಳನ್ನು ವಿರೋಧಿಸಿದವರಿಗೆ ಸುಳ್ಳು ಕೇಸುಗಳು, ಲಾಠಿ ಚಾರ್ಜ್‌ಗಳು, ಚಿತ್ರಹಿಂಸೆಗಳು, ಅಕ್ರಮ ಬಂಧನಗಳ ಮೂಲಕ ಉತ್ತರಿಸಿತು.

ಸಾಮಾಜಿಕ ಬದಲಾವಣೆಗಾಗಿ ನಿಸ್ವಾರ್ಥತೆಯಿಂದ ದುಡಿಯುತ್ತಿದ್ದ ಕಾಮ್ರೇಡ್ ಸಾಕೇತ್ ರಾಜನ್, ಶಿವಲಿಂಗುರಂತಹವರ ಕಗ್ಗೊಲೆಗಳನ್ನು ನಡೆಸಿತು. ಕಾಮ್ರೇಡ್ ಉಜ್ಜನಿಗೌಡರನ್ನು ಅಕ್ರಮವಾಗಿ ಬಂಧಿಸಿ ಸುಳ್ಳು ಎನ್‌ಕೌಂಟರಿನಲ್ಲಿ ಕಗ್ಗೊಲೆ ನಡೆಸುವ ಕುತಂತ್ರವು ಜನರು ಹಾಗೂ ಪ್ರಜಾತಂತ್ರವಾದಿಗಳ ಒತ್ತಡದಿಂದಾಗಿ ಕೈಗೂಡದೆ ಹೋದಾಗ ಹಲವಾರು ಸಂಬಂಧವೇ ಇಲ್ಲದ ಕೇಸುಗಳನ್ನು ಹಾಕಿ ಜೈಲಿನಲ್ಲಿ ಕೊಳೆಸುತ್ತಿದೆ. ಅರಣ್ಯ ಯೋಜನೆಗಳು, ಅಭಿವೃದ್ಧಿ ಯೋಜನೆಗಳ ನೆಪದಲ್ಲಿ ರೈತಾಪಿಗಳನ್ನು ಜನಸಾಮಾನ್ಯರನ್ನು ಒಕ್ಕಲೆಬ್ಬಿಸಲು ಪ್ರಯತ್ನಿಸಿತು. ಗಣಿ ಮಾಫಿಯಾ, ಮದ್ಯ ಮಾಫಿಯಾಗಳ ಜೊತೆ ಕೈಜೋಡಿಸಿತು, ಕೇಂದ್ರಾಧಿಪತ್ಯದ ಗುಲಾಮಗಿರಿ ಮಾಡಿತು. ರೈತರ ಆತ್ಮಹತ್ಯೆಗಳ ಪ್ರಮಾಣ ಏರತೊಡಗಿತು. ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಹೆಚ್ಚಾದವು. ದಲಿತರ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಮಾಣ ಏರಿತು. ನಂತರ ಧರ್ಮ್‌ಸಿಂಗ್ ಸರ್ಕಾರವನ್ನು ಕುತಂತ್ರದಿಂದ ಉರುಳಿಸಿ ಹಿಂದೂ ಫ್ಯಾಸಿಸಂನ ವಕ್ತಾರ ಪಕ್ಷವಾದ ಬಿಜೆಪಿಯೊಂದಿಗೆ ಅವಕಾಶವಾದಿ ಮೈತ್ರಿ ಮಾಡಿಕೊಂಡು ತನ್ನ ಜಾತ್ಯಾತೀತತೆಯ ನಿಜ ಹೂರಣವನ್ನು ತೋರಿಸಿಕೊಂಡ ಕುಮಾರಸ್ವಾಮಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಇದು ಕೂಡ ಈ ಹಿಂದಿನ ಸರ್ಕಾರಗಳ ಲೂಟಿ ಪರಂಪರೆಯನ್ನು ಮುಂದುವರಿಸುತ್ತಾ ಮತ್ತಷ್ಟು ತೀವ್ರಗೊಳಿಸಿತು. ಸಾವಿರಾರು ಭೂಕಬಳಿಕೆಗಳು, ಕೊಳಚೆವಾಸಿಗಳನ್ನು ಬೀದಿಗೆಸೆಯುವಿಕೆ, ಎಪಿಎಂಸಿ ಕಾಯ್ದೆಗೆ ತಿದ್ದುಪಡಿ, ನೂರಾರು ಕೋಟಿಯ ಗಣಿ ಹಗರಣ, ತೀವ್ರಗೊಳಿಸಿದ ಆತ್ಮಹತ್ಯೆಗಳ ಪ್ರಮಾಣ ಇತ್ಯಾದಿಗಳೇ ಇದರ ಸಾಧನೆಗಳಾಗಿವೆ. ಇವುಗಳನ್ನು ಮರೆಮಾಚಲು, ಕಡಿಮೆ ಗುಣಮಟ್ಟದ ಸೈಕಲ್ ವಿತರಣೆ, ಗ್ರಾಮ ವಾಸ್ತವ್ಯ, ರೈತರೊಂದಿಗೆ ನೇರ ಸಂವಾದ, ಪ್ಯಾಕೇಜ್ ಘೋಷಣೆ ಇತ್ಯಾದಿ ಜನಸಾಮಾನ್ಯರಿಗೆ ಮೂಲಭೂತವಾಗಿ ಪ್ರಯೋಜನಕ್ಕೆ ಬಾರದ ಗಿಮಿಕ್‌ಗಳನ್ನು ನಡೆಸಿತು. 20 ತಿಂಗಳು ಅಧಿಕಾರ ನಡೆಸಿ ಆಳುವ ವರ್ಗಗಳ ಹಿತ ಕಾಪಾಡಿ ಬಿಕ್ಕಟ್ಟಿನಿಂದಾಗಿ ನಿಲ್ಲಲಾಗದೆ ಉರುಳಿತು.

ಇದರ ಮಧ್ಯೆ ಉಪಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಕೆಲವು ದಿನಗಳ ಕಾಲ ಮುಖ್ಯಮಂತ್ರಿ ಎನಿಸಿಕೊಂಡರು. ಈ ಕಾಲಾವಧಿಯಲ್ಲಿ ಭೂಕಬಳಿಕೆ, ಅಕ್ರಮ ಸಂಪತ್ತು ಗಳಿಕೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಲೂಟಿ, ದೌರ್ಜನ್ಯ, ಹಗಲು ದರೋಡೆ ಇತ್ಯಾದಿಗಳು ಮತ್ತೂ ತೀವ್ರಗೊಂಡವು. ಪ್ರಜಾತಂತ್ರವಾದಿಗಳ, ಪ್ರಗತಿಪರ ಬುದ್ಧಿಜೀವಿಗಳ ಮೇಲೆ ಹಲ್ಲೆ, ಅವಮಾನದಂತಹ ಧ್ವನಿಯಡಗಿಸುವ ಫ್ಯಾಸಿಸ್ಟ್ ಕ್ರಮಗಳನ್ನು ಜಾರಿ ಮಾಡಿತು.

ಮಲೆನಾಡು ಕರಾವಳಿಗಳಲ್ಲಿ ಬೆಳೆಯುತ್ತಿರುವ ಕ್ರಾಂತಿಕಾರಿ ಚಳುವಳಿಯನ್ನು ದಮನಿಸಲು ಮೆಣಸಿನಹಾಡ್ಯ ಹತ್ಯಾಕಾಂಡ ನಡೆಸಿ ಜನರಲ್ಲಿ ಭಯೋತ್ಪಾದನೆ ಮಾಡಲು ಯತ್ನಿಸಿ ಹುಸಿ ಪ್ಯಾಕೇಜ್‌ಗಳ ಘೋಷಣೆ ಮುಂದುವರಿಸಿತು. ಸುಳ್ಳು ಕೇಸು, ಅಕ್ರಮ ಬಂಧನಗಳು, ಚಿತ್ರಹಿಂಸೆಗಳು, ಸುಳ್ಳು ಎನ್‌ಕೌಂಟರ್‌ಗಳನ್ನು ನಡೆಸಿತು. ಹಿಂದೂ ಫ್ಯಾಸಿಸ್ಟ್ ಆಕ್ರಮಣಗಳಿಗೆ ಬೆಂಗಾವಲು ನೀಡಿತು. ಅಲ್ಪಸಂಖ್ಯಾತರ ದಲಿತರ ಮೇಲಿನ ದಾಳಿಗಳು ತೀವ್ರವಾದವು. ದರೋಡೆ, ಸುಲಿಗೆಗಳ ಪ್ರಮಾಣ ಹೆಚ್ಚಾದವು. ಕಬ್ಬು ಬೆಳೆಗಾರರ ಆತ್ಮಹತ್ಯೆದಳು ಹೆಚ್ಚಾದವು. ರೈತರ ಸಾಲ ಮನ್ನಾ ಮಾಡುತ್ತೇವೆಂಬ, ಸಾರಾಂಶದಲ್ಲಿ ಹುಸಿಯಾಗಿದ್ದ ಘೋಷಣೆ ಮಾಡಿತು. ಸಾರಾಯಿ ನಿಷೇಧ ಮಾಡಿ ಮದ್ಯ ದೊರೆಗಳ ಬೆಂಗಾವಲಿಗೆ ನಿಂತಿತು. ಜನಸಾಮಾನ್ಯರ ದುಡಿಮೆಯ ಹಣ ನೇರವಾಗಿ ಮದ್ಯದ ದೊರೆಗಳಿಗೆ ತಲುಪುವಂತೆ ಮಾಡಿತು.

20 ತಿಂಗಳ ಕಾಲಾವಧಿಯ ಒಪ್ಪಂದ ಮುಗಿಯುವ ಹೊತ್ತಿಗೆ ಅಧಿಕಾರ ಹಸ್ತಾಂತರ ನಾಟಕ ನಡೆಸಿ ಜನರ ಕಣ್ಣಿಗೆ ತಾನೊಬ್ಬ ನೈಜ ಜಾತ್ಯಾತೀತ ಎಂಬಂತೆ ಬಿಂಬಿಸಲು ಪ್ರಯತ್ನಿಸಿತು. ಬಿಕ್ಕಟ್ಟು ಮತ್ತೂ ತೀವ್ರವಾಗಿದ್ದರಿಂದಾಗಿ ಸರ್ಕಾರ ಮುನ್ನಡೆಯದೆ ರಾಷ್ಟ್ರಪತಿ ಆಳ್ವಿಕೆ ಹೇರಲ್ಪಟ್ಟಿತು.

ಈ ಕಾಲಾವಧಿಯಲ್ಲಿ ವಿರೋಧ ಪಕ್ಷಗಳ ಸ್ಥಾನದಲ್ಲಿದ್ದ ರಾಜಕೀಯ ಪಕ್ಷಗಳು ಗಟ್ಟಿಧ್ವನಿಯಲ್ಲಿ ಮಾತನಾಡದೆ ಕುಳಿತಿದ್ದವು. ಇಷ್ಟೆಲ್ಲಾ ಅಕ್ರಮ ನಡೆಯುತ್ತಿದ್ದರೂ ಅವುಗಳ ಕುರಿತು ಪ್ರಬಲ ಪ್ರತಿರೋಧವನ್ನು ಒಡ್ಡದೆ ನಾಮಮಾತ್ರದ ಪ್ರತಿಭಟನೆ ಸೂಚಿಸಿದವು. ಕೆಲವರು ಮಾಧ್ಯಮಗಳ ಮುಂದೆ ಕೀರಲು ಧ್ವನಿಯ ಪ್ರತಿಭಟನೆ ಸೂಚಿಸಿದರು. ವಿಧಾನ ಸಭೆಯ ಕಲಾಪಗಳಲ್ಲಿ ಕೂಡ ಕರ್ನಾಟಕದ ಜನರು ಎದುರಿಸುತ್ತಿರುವ ಆತ್ಮಹತ್ಯೆ, ಪಡಿತರ ಕುಡಿಯುವ ನೀರು ಆಸ್ಪತ್ರೆ, ಶಾಲೆ, ಸಾಲಗಾರರ ಸಮಸ್ಯೆ ಇತ್ಯಾದಿ .... ತೀವ್ರ ಸಮಸ್ಯೆಗಳ ಕುರಿತು ಗಂಭೀರವಾಗಿ ಚರ್ಚೆಗಳು ನಡೆಯಲೇ ಇಲ್ಲ. ಎಲ್ಲಾ ಚುನಾಯಿತ ಎನ್ನಿಸಿಕೊಂಡ ಜನಪ್ರತಿನಿಧಿಗಳು ಆಸ್ತಿ ದೋಚುವಿಕೆ ಮತ್ತು ಕಳ್ಳ ವ್ಯವಹಾರಗಳಲ್ಲಿ ನೇರ ಮತ್ತು ಪರೋಕ್ಷವಾಗಿ ತೊಡಗಿದ್ದರು.

2006ರಲ್ಲೆ ಕರ್ನಾಟಕದಲ್ಲಿ ನಡೆದ ಆತ್ಮಹತ್ಯೆಗಳ ಪ್ರಮಾಣ 1720 ಎಂದು ಒಂದು ಅಂಕಿಅಂಶ ಹೇಳುತ್ತದೆ. ಒಟ್ಟು ದೇಶದ ಆತ್ಮಹತ್ಯೆಗಳ ಸುಮಾರು 38% ಕರ್ನಾಟಕದಲ್ಲೆ ನಡೆಯುತ್ತಿದೆ. ಆದರೆ ರಾಷ್ಟ್ರೀಯ ಸರಾಸರಿ ಆತ್ಮಹತ್ಯೆ ಪ್ರಮಾಣ ಶೇಕಡಾ 20. ಅಂದರೆ ಕರ್ನಾಟಕದಲ್ಲಿ ಇರುವ ಪರಿಸ್ಥಿತಿ ಎಂತಹ ಬಿಕ್ಕಟ್ಟಿನದು ಎಂಬುದನ್ನು ನೋಡಬಹುದು. ಇದಲ್ಲದೆ ದಾಖಲೆಯಾಗದ ಎಷ್ಟೋ ಆತ್ಮಹತ್ಯೆಗಳ ಪ್ರಕರಣಗಳಿವೆ.

ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರಲ್ಲಿ ಕಬ್ಬು ಬೆಳೆಗಾರರು, ತೊಗರಿ ಬೆಳೆಗಾರರು, ಅಡಿಕೆ, ಕಾಫಿ ಹಾಗೂ ತೆಂಗು ಬೆಳೆಗಾರರು ಸೇರಿದ್ದಾರೆ. ಇನ್ನು ಬಡತನದಿಂದಾಗಿ, ಕೂಲಿಯಿಲ್ಲದೆ, ರೋಗರುಜಿನಗಳಿಗೆ ವೈದ್ಯಕೀಯ ನೆರವಿಲ್ಲದೆ ಸಾಯುವವರ ಲೆಕ್ಕವನ್ನು ಸರಿಯಾಗಿ ಯಾರೂ ಇಟ್ಟಿಲ್ಲ. ಇಡುವುದೂ ಇಲ್ಲ. ಇದರ ಜೊತೆಗೆ ಯುವಕ/ತಿಯರು, ವಿದ್ಯಾರ್ಥಿ/ನಿಯರು ಭವಿಷ್ಯದ ದಾರಿ ತೋಚದೆ ಮಾನಸಿಕ ಅಸ್ವಸ್ಥರಾಗುವುದು ಆತ್ಮಹತ್ಯೆಗಳಿಗೆ ಇಳಿಯುವ ಪ್ರಕರಣಗಳು ದಿನೇದಿನೇ ಏರುತ್ತಿವೆ. ಇವು ಒಂದುಕಾಲದಲ್ಲಿ ಕೈಗಾರಿಕೆಗಳು ಸಾಪೇಕ್ಷವಾಗಿ ಹೆಚ್ಚಿದ್ದ ದಾವಣಗೆರೆ, ಭದ್ರಾವತಿ, ಬೆಳಗಾವಿ, ಗುಲಬರ್ಗಾಗಳಂತಹ ಕಡೆಗಳಲ್ಲಿ ಹೆಚ್ಚಿದೆ. ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು, ದಕ್ಷಿಣ ಕನ್ನಡ, ಮಂಡ್ಯ, ಮೈಸೂರು, ಹುಬ್ಬಳ್ಳಿಗಳಂತಹ ಸಾಪೇಕ್ಷ ಅಭಿವೃದ್ಧಿತ ಪ್ರದೇಶಗಳು ಎನಿಸಿಕೊಂಡ ಕಡೆಗಳಲ್ಲೂ ಆತ್ಮಹತ್ಯೆ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ.ರಾಜಧಾನಿ ಬೆಂಗಳೂರಿನ ಆತ್ಮಹತ್ಯೆಗಳ ಪ್ರಮಾಣ ದಿನೇದಿನೇ ಏರುತ್ತಿದೆ. ಇದು ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಪಡಿಸುತ್ತದೆ.

### ತೊಲಗದ ಊಳಿಗಮಾನ್ಯ ಭೂಮಾಲೀಕತ್ವ, ಆಗದ ಕೈಗಾರೀಕರಣ

ರಾಜ್ಯದ ಭೂಸಂಬಂಧಗಳಲ್ಲಿ ಮೂಲಭೂತ ಬದಲಾವಣೆ ಬಂದಿಲ್ಲ. ಭೂಸುಧಾರಣೆ ಮಾಡಲಾಗಿದೆ ಎಂದು ಬಿಂಬಿಸುತ್ತಿದ್ದರೂ ಭೂಹಿಡುವಳಿ ಸುಮಾರು ಶೇ. 5ರಷ್ಟಿರುವ ಭೂಮಾಲೀಕರ ಕೈಯಲ್ಲೇ ಕೇಂದ್ರೀಕೃತವಾಗಿದೆ. ಉತ್ತರ ಕರ್ನಾಟಕದಲ್ಲಿ ಭೂಮಾಲೀಕ ಶೋಷಣೆ ಸಾಪೇಕ್ಷವಾಗಿ ಕಚ್ಚಾ ರೂಪಗಳಲ್ಲಿದ್ದರೆ, ದಕ್ಷಿಣ ಕರ್ನಾಟಕದಲ್ಲಿ ಸಾಪೇಕ್ಷವಾಗಿ ಸುಧಾರಿತ ರೂಪಗಳಲ್ಲಿದೆ. ಆದರೆ ಶೋಷಣೆ ಲೂಟಿ ಸಾಮಾಜಿಕ ಹಿಡಿತ ಒಂದೇ ಆಗಿದೆ. ಬಹುಸಂಖ್ಯಾತ ಜನರು ಊಳಿಗಮಾನ್ಯ ಭೂಮಾಲೀಕತ್ವ ನೊಗದಡಿ ನಲುಗುತ್ತಿದ್ದಾರೆ. ಈ ಭೂಮಾಲೀಕ ವರ್ಗವೇ ರಾಜಕೀಯಾಧಿಕಾರ ಚಲಾಯಿಸುತ್ತಿದೆ. ಬಡ್ಡಿ ಸಾಲ ವ್ಯವಹಾರ, ರೈತಾಪಿಗಳ ಶ್ರಮದ ಲೂಟಿ, ದಲಿತರ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ, ಬಹಿಷ್ಕಾರ, ಅತ್ಯಾಚಾರ, ಜಾತಿ ದೌರ್ಜನ್ಯಗಳನ್ನು ನಡೆಸುತ್ತಾ ಪಂಚಾಯಿತಿಯಂತಹ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಸಭೆಯವರೆಗೂ ಈ ವರ್ಗ ಹಿಡಿತ ಇಟ್ಟುಕೊಂಡಿದೆ. ದೇವೇಗೌಡ, ಬಿ.ಎಲ್. ಶಂಕರ್, ಡಿ.ಬಿ. ಚಂದ್ರೇಗೌಡ, ಕಡಿದಾಳ್ ಮಂಜಪ್ಪ, ಬಂಗಾರಪ್ಪ, ಯಡಿಯೂರಪ್ಪ, ಭೀಮಣ್ಣ ಖಂಡ್ರೆ, ಎಚ್.ಕೆ. ಪಾಟೀಲ್, ಧರ್ಮ್‌ಸಿಂಗ್ ಮೊದಲಾದವರು ಈ ರೀತಿಯ ದೊಡ್ಡ ಭೂಮಾಲೀಕರೆ ಆಗಿದ್ದಾರೆ. ಇವರುಗಳಲ್ಲಿ ಕೆಲವರು ವ್ಯಾಪಾರ ವ್ಯವಹಾರ, ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳನ್ನು ಕೂಡ ನಡೆಸುತ್ತಿದ್ದಾರೆ. ಇದರ ಜೊತೆಗೆ ಊಳಿಗಮಾನ್ಯ ಮಠಗಳು, ಸಾವಿರಾರು ಎಕರೆ ಭೂಮಿಯ ಹಿಡಿತ ಇಟ್ಟುಕೊಂಡಿವೆ. ಊಳಿಗಮಾನ್ಯ ಚಿಂತನೆಗಳನ್ನು ಜನರ ಮಧ್ಯೆ ಹರಡುತ್ತಾ ಸಾಮಾಜಿಕ ಹಾಗೂ ಆರ್ಥಿಕ ಹಿಡಿತ ಇಟ್ಟುಕೊಂಡಿವೆ. ಈ ಮಠಗಳು ಜನಸಾಮಾನ್ಯರ ಭೂಮಿಗಳನ್ನು ಅಕ್ರಮವಾಗಿ ಹಿಡಿದಿಟ್ಟುಕೊಂಡಿವೆ. ಕ್ರಾಂತಿಕಾರಿ ಭೂಹಂಚಿಕೆಯಾಗಿ ಜನರಲ್ಲಿ ಕೊಳ್ಳುವ ಶಕ್ತಿ ಹೆಚ್ಚಾಗದೆ. ಕೈಗಾರಿಕೆಗಳು ಬೆಳೆಯಲು ಸಾಧ್ಯವಿಲ್ಲ. ಗ್ರಾಮೀಣಾಧಾರಿತ ಕೈಗಾರಿಕೆಳು ಬೆಳೆಯದೆ ನಿರುದ್ಯೋಗ, ಬಡತನ, ವಲಸೆ ನಿಲ್ಲುವುದಿಲ್ಲ.

### ತೊಲಗದ ದಲ್ಲಾಳಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ, ದೊರೆಯದ ಸ್ವಾತಂತ್ರ್ಯ

ಭಾರತದ ಆಳುವ ವರ್ಗಗಳಲ್ಲಿ ಒಂದಾದ ದಲ್ಲಾಳಿ ಅಧಿಕಾರಶಾಹಿ ಬಂಡವಾಳಶಾಹಿಗಳು ಕೈಗಾರಿಕೆ ವ್ಯಾಪಾರ ವಹಿವಾಟುಗಳಲ್ಲಿ ಏಕಸ್ವಾಮ್ಯ ಸಾಧಿಸುತ್ತಾ ಸಾವಿರಾರು ಕೋಟಿಯ ಸಂಪತ್ತನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಜೊತೆಗೆ ಸಾವಿರಾರು ಎಕರೆ ಭೂಮಿಯು ಇವರ ಹಿಡಿತದಲ್ಲಿ ಇದೆ. ಇವರು ಸಾಮ್ರಾಜ್ಯಶಾಹಿ ಕಂಪೆನಿಗಳಿಗೆ ದಲ್ಲಾಳಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಇನ್ಫೋಸಿಸ್‌ನ ನಾರಾಯಣ ಮೂರ್ತಿ, ವಿಪ್ರೋನ ಅಜೀಂ ಪ್ರೇಮ್‌ಜಿ, ಯುನೈಟೆಡ್ ಬ್ರಿವರೀಸ್‌ನ ವಿಜಯ್ ಮಲ್ಯ, ಎ.ಬಿ.ಸಿ ಯ ಸಿದ್ಧಾರ್ಥ, ಮಣಿಪಾಲ್‌ನ ಪೈ, ಬಯೋಕಾನ್‌ನ ಕಿರಣ್ ಮಜುಂದಾರ್ ಷಾ, ವಿ.ಆರ್.ಎಲ್.ನ ವಿಜಯ್ ಸಂಕೇಶ್ವರ ಮೊದಲಾದವರೆಲ್ಲಾ ದಲ್ಲಾಳಿ ಅಧಿಕಾರಶಾಹಿ ಬಂಡವಾಳಶಾಹಿಗಳಾಗಿದ್ದಾರೆ. ಇವರುಗಳು ಸಾಮ್ರಾಜ್ಯಶಾಹಿ ಕಂಪೆನಿಗಳೊಂದಿಗೆ ಒಪ್ಪಂದ, ಹೊಂದಾಣಿಕೆ, ಸಹಯೋಗ, ತಾಂತ್ರಿಕ ಸಹಯೋಗ, ಒಳಗುತ್ತಿಗೆ ಇತ್ಯಾದಿಗಳ ಮೂಲಕ ನೇರ ಮತ್ತು ಪರೋಕ್ಷ ಸಂಬಂಧ ಇಟ್ಟುಕೊಂಡಿದ್ದಾರೆ. ಭಾರತದ ಜನ, ನೆಲ, ಜಲ ಸಂಪತ್ತುಗಳನ್ನು ಸಾಮ್ರಾಜ್ಯಶಾಹಿಗಳ ಪಾದದಡಿ ಅರ್ಪಿಸುವ, ಅದಕ್ಕೆಂದೇ ನೀತಿ ನಿಯಮಾವಳಿಗಳನ್ನು ರೂಪಿಸುವುದು, ಲಾಬಿ ಮಾಡುವುದು

ಇತ್ಯಾದಿಗಳನ್ನೆಲ್ಲಾ ಮಾಡುತ್ತಾ ಅದರಿಂದ ಹೆಚ್ಚಿನ ಕಮಿಷನ್, ಒಳ ಲಾಭಗಳನ್ನು ಗಳಿಸುತ್ತಾ ದೇಶೀಯ ಕೈಗಾರಿಕೆಗಳು ಬೆಳೆಯದಂತೆ ತಡೆಗಳನ್ನೊಡ್ಡುತ್ತಿದ್ದಾರೆ. ಬಂದಂತಹ ಆದಾಯಗಳನ್ನು ಉತ್ಪಾದನೆಗೆ ಮರುಹೂಡಿಕೆ ಮಾಡುತ್ತಿಲ್ಲ. ಸೇವಾಕ್ಷೇತ್ರ, ಶೇರು ಮಾರುಕಟ್ಟೆಯೆಂಬ ಜೂಜು, ಬ್ಯಾಂಕಿಂಗ್ ಕ್ಷೇತ್ರ, ವಿಮಾ ಕ್ಷೇತ್ರ ಎಂಬ ಬಡ್ಡಿ ಹಾಗೂ ಬಂಡವಾಳ ಕ್ರೋಢೀಕರಣ ವ್ಯವಹಾರಗಳಿಗೆ ಪ್ರಧಾನವಾಗಿ ತೊಡಗಿಸುತ್ತಿದ್ದಾರೆ. ಸಾಮ್ರಾಜ್ಯಶಾಹಿಗಳಿಗೆ ದಲ್ಲಾಳಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಭೂಹಂಚಿಕೆ, ದೇಶೀಯ ಕಚ್ಚಾ ವಸ್ತುಗಳ ಉಪಯೋಗ, ಗ್ರಾಮೀಣ ಆಧಾರಿತ ಕೈಗಾರಿಕೆಗಳ ಸ್ಥಾಪನೆ ಕೈಗಾರೀಕರಣ, ಉದ್ಯಾಗಾವಕಾಶಗಳ ಹೆಚ್ಚಳ, ನಿರುದ್ಯೋಗ ಹಾಗೂ ವಲಸೆಗಳಿಗೆ ತಡೆ, ಅಸಮಾನ ಬೆಳವಣಿಗೆಗಳ ಸರಿಪಡಿಸುವಿಕೆ .... ಹೀಗೆ ಎಲ್ಲಾ ಅಭಿವೃದ್ಧಿಗಳಿಗೆ ತೊಡಕನ್ನುಂಟು ಮಾಡುತ್ತಿದ್ದಾರೆ. ಸ್ವಾಯತ್ತತೆ ಹಾಗೂ ಸ್ವತಂತ್ರ ಬೆಳವಣಿಗೆಗಳನ್ನು ಅಡ್ಡಗಟ್ಟುತ್ತಿದ್ದಾರೆ.

**ಈಗ ನಡೆಯುತ್ತಿರುವ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಜನರ ಬದುಕುವ ಅವಕಾಶಗಳನ್ನು ಕಸಿಯುತ್ತಿರುವುದು, ದಿನೇದಿನೇ ಹೆಚ್ಚುತ್ತಿರುವ ಬಡತನ, ಶೋಷಣೆ, ನಿರುದ್ಯೋಗ, ಆತ್ಮಹತ್ಯೆ ಇತ್ಯಾದಿಗಳಿಗೆಲ್ಲಾ ಈ ರೀತಿಯ ಊಳಿಗಮಾನ್ಯ ಭೂಮಾಲೀಕರು, ದಲ್ಲಾಳಿ ಬಂಡವಾಳಶಾಹಿಗಳು ಮತ್ತು ಪ್ರಪಂಚ ಬಂಡವಾಳಶಾಹಿಗಳು ಪ್ರಧಾನ ಕಾರಣರಾಗಿದ್ದಾರೆ.**

ಇಂದು ಆಳುವ ವರ್ಗಗಳ ಅಂಕಿಅಂಶಗಳ ಪ್ರಕಾರವೇ ಭಾರತದ ಹಣದುಬ್ಬರ ಶೇಕಡಾ 7.41, 2002ರಿಂದ ಇಲ್ಲಿಯವರೆಗೆ ಒಂದು ಅಂಕಿಅಂಶದ ಪ್ರಕಾರ ಸುಮಾರು ಎರಡು ಲಕ್ಷಕ್ಕೂ ಹೆಚ್ಚಿನ ಆತ್ಮಹತ್ಯೆಗಳಾಗಿವೆ. ಕೇಂದ್ರದಲ್ಲಿದ್ದ ಹಿಂದಿನ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಸುಮಾರು 500 ಕೋಟಿ ರೂಪಾಯಿಗಳಿಗೂ ಹೆಚ್ಚು ಖರ್ಚು ಮಾಡಿ 'ಭಾರತ ಪ್ರಕಾಶಿಸುತ್ತಿದೆ' ಎಂದು ಬೊಬ್ಬೆ ಹೊಡೆದಿದ್ದೆಲ್ಲಾ ಬೊಗಳೆ. ವಾಸ್ತವದಲ್ಲಿ ಭಾರತ ಅಂಧಕಾರದಲ್ಲಿ ಕಮರುತ್ತಿದೆ ಎಂಬುದು ಕುಸಿಯುತ್ತಿರುವ ಕೃಷಿ ಉತ್ಪಾದನೆ, ಇಳಿಕೆಯಾಗುತ್ತಿರುವ ಕೈಗಾರಿಕಾ ಉತ್ಪಾದನೆ, ಆಹಾರಕ್ಕೂ ಆಮದಿನ ಅವಲಂಬನೆ, ಸಾಮ್ರಾಜ್ಯಶಾಹಿ ಕಂಪೆನಿಗಳಿಗೆ ಬಿತ್ತನೆ ಬೀಜ, ಕೀಟನಾಶಕ, ಕಳೆನಾಶಕ, ಗೊಬ್ಬರ ಹೀಗೆ ಎಲ್ಲದರ ನಿಯಂತ್ರಣ ನೀಡಿದ್ದು, ಉತ್ಪಾದನೆ ಕ್ಷೇತ್ರದ ನಿರ್ಲಕ್ಷ್ಯ, ಸೇವಾ ವಲಯಕ್ಕೆ ಪ್ರಧಾನ ಆದ್ಯತೆ, ಲೈಂಗಿಕ ಉದ್ಯಮ?!, ಪ್ರವಾಸೋದ್ಯಮಗಳ ಹೆಚ್ಚಳ ಸಾರ್ವಜನಿಕ ರಂಗಗಳನ್ನು ಸಾಮ್ರಾಜ್ಯಶಾಹಿಗಳಿಗೆ ಮತ್ತವರ ದಲ್ಲಾಳಿಗಳಿಗೆ ತೆರೆದಿಡುವಿಕೆ, ಮಿಲಿಟರಿ ಮತ್ತು ಪೋಲಿಸ್ ವ್ಯವಸ್ಥೆಗಾಗಿ ಮಿಲಿಯಾಂತರ ಕೋಟಿ ರೂಪಾಯಿಗಳ ಖರ್ಚು ಮಾಡುವಿಕೆ (ಒಂದು ಅಂದಾಜಿನ ಪ್ರಕಾರ ಪ್ರತಿವರ್ಷ ಒಂದು ಲಕ್ಷ ನಲವತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ರಕ್ಷಣೆ ಹೆಸರಿನಲ್ಲಿ ಖರ್ಚು ಮಾಡಲಾಗುತ್ತಿದೆ)

ಅದೇ ಹೊತ್ತಿಗೆ ಭಾರತದ ಶೇ. 70ರಷ್ಟು ಜನರಿಗೆ ದಿನವೊಂದಕ್ಕೆ ಕೇವಲ 20 ರೂಪಾಯಿಗಳಲ್ಲಿ ಜೀವಿಸಬೇಕಾದ ಪರಿಸ್ಥಿತಿಯಿದೆ ಎಂದು ಅಸಂಘಟಿತ ಕ್ಷೇತ್ರಗಳ ಉದ್ದಿಮೆಗಳ ಕುರಿತಾದ ರಾಷ್ಟ್ರೀಯ ಆಯೋಗದ ಇತ್ತೀಚೆಗೆ ಪ್ರಕಟವಾದ ವರದಿ ಹೇಳಿದೆ. ಒರಿಸ್ಸಾದಂತಹ ಕಡೆಗಳಲ್ಲಿ ಶೇ 57ರಷ್ಟು ಜನ ದಿನವೊಂದಕ್ಕೆ ಕೇವಲ 12 ರೂಪಾಯಿಗಳಲ್ಲಿ ಬದುಕಬೇಕಾಗಿದೆ ಎಂದು ಅಲ್ಲಿನ ವಿರೋಧ ಪಕ್ಷದ ನಾಯಕರೇ ಹೇಳಿದ್ದಾರೆ. ಅಪೌಷ್ಟಿಕತೆ, ರಕ್ತಹೀನತೆಯಿಂದಾಗಿ ಸಾಯುತ್ತಿರುವವರ ಸಂಖ್ಯೆಗಳು ಲೆಕ್ಕಕ್ಕೆ ಸಿಗುವುದಿಲ್ಲ.

ಅದೇ ಹೊತ್ತಿಗೆ ದಲ್ಲಾಳಿಗಳ ಕಂಪೆನಿಗಳು ಕ್ರೋಢೀಕರಿಸಿಕೊಂಡ ಸಂಪತ್ತು ಬಿಲಿಯಾಂತರ ಡಾಲರ್‌ಗಳಾಗಿವೆ. ಈ ರೀತಿಯ ಭಾರತದ 100ರಷ್ಟು ದಲ್ಲಾಳಿ ಕಂಪೆನಿಗಳು ಬಿಲಿಯನ್ ಡಾಲರ್‌ಗಳಿಗಿಂತಲೂ ಹೆಚ್ಚಿನ ಮಾರುಕಟ್ಟೆ ಬಂಡವಾಳ ಹೊಂದಿವೆ. ಅದರಲ್ಲಿ ಕರ್ನಾಟಕ ಮೂಲದ ನಾಲ್ಕೈದು ಕಂಪೆನಿಗಳಿವೆ. ಅಂದರೆ ಭಾರತದ ಮಣ್ಣಿನ ಮಕ್ಕಳ ಬೆವರು ರಕ್ತದಿಂದ ಉತ್ಪಾದನೆಯಾಗುವ ಆದಾಯಗಳನ್ನು ಈ ಪರಾವಲಂಬಿ ದಲ್ಲಾಳಿ ಕಂಪೆನಿಗಳು ದೋಚಿ ನುಂಗುತ್ತಿವೆ ಎಂಬುದೇ ಇದರ ಅರ್ಥ. ಭಾರತದ ಕಾರ್ಮಿಕರು ರೈತರು ಇನ್ನಿತರ ವರ್ಗಗಳನ್ನು ನೆಲದಡಿ ಹೂಳುತ್ತಾ ಮಿತ್ತಲ್‌ಗಳು, ಟಾಟಾಗಳು, ಅಂಬಾನಿಗಳು, ನಾರಾಯಣ ಮೂರ್ತಿ, ನಿಲೇಕಣಿ, ಪ್ರೇಮ್‌ಜಿ, ಮಲ್ಯಗಳಂತಹ ದಲ್ಲಾಳಿಗಳೇ ಬಿಲಿಯನ್‌ಗಟ್ಟಲೆ ಕೊಳ್ಳೆ ಹೊಡೆಯುತ್ತಿದ್ದಾರೆ. ಅಂದರೆ ನಿಯಂತ್ರಣ ಮಾಡುತ್ತಿರುವ ಸಾಮ್ರಾಜ್ಯಶಾಹಿ ಕಂಪೆನಿಗಳು ಎಷ್ಟು ಬಿಲಿಯನ್ ಡಾಲರ್‌ಗಳನ್ನು ಲೂಟಿ ಮಾಡಿ ಸಾಗಿಸಿರಬೇಕು! ಇವರುಗಳ ಚೇಲಾಗಳಾದ ರಾಜಕೀಯ ಪಕ್ಷಗಳು, ರಾಜಕಾರಣಿಗಳು ಮತ್ತವರ ಏಜೆಂಟರುಗಳು ಎಷ್ಟು ಕೋಟಿಗಳು ಗಳಿಸಿರಬೇಡ!

**ಪ್ರಸ್ತುತ ಪ್ರಪಂಚದ ಬಿಕ್ಕಟ್ಟು ತೀವ್ರವಾಗಿದೆ. ವಿಶ್ವದ ಪ್ರಥಮ ಶತ್ರು ಅಮೇರಿಕದ ಆರ್ಥಿಕತೆ ಕುಸಿತದಲ್ಲಿದೆ ಹಲವಾರು ದೇಶಗಳು ತೀವ್ರ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಪ್ರಪಂಚದಲ್ಲಿ ಹಣದುಬ್ಬರ, ಬೆಲೆಯೇರಿಕೆ ತೀವ್ರವಾಗಿದೆ. ಸಾಮ್ರಾಜ್ಯಶಾಹಿ ದೇಶಗಳಾದ ಫ್ರಾನ್ಸ್, ಜರ್ಮನಿ, ಜಪಾನ್‌ಗಳ ನಿರುದ್ಯೋಗ, ಬಡತನ, ಉದ್ಯೋಗ ಅವಕಾಶಗಳ ನಷ್ಟ ತೀವ್ರವಾಗಿದೆ. ಇಂದಿನ ಪ್ರಪಂಚದ ಬಿಕ್ಕಟ್ಟು ಎರಡನೇ ಮಹಾಯುದ್ಧಕ್ಕೆ ಕಾರಣವಾದ ಬಿಕ್ಕಟ್ಟಿಗಿಂತಲೂ ಹೆಚ್ಚು ತೀವ್ರವಾಗಿದೆ. ಈ ಎಲ್ಲಾ ಬಿಕ್ಕಟ್ಟಿನ ನೇರ ಪ್ರಭಾವ ಭಾರತದ ಮೇಲೆ ಇದೆ.**

**ಇದರ ಪರಿಣಾಮವಾಗಿ ಫ್ಯಾಸಿಸಂಅನ್ನು ಬೆಳೆಸುತ್ತಿದ್ದಾರೆ. ಭಾರತದ ಆಳುವ ವರ್ಗಗಳು ಹಿಂದೂ ಫ್ಯಾಸಿಸಂಅನ್ನು ಬೆಳೆಸುತ್ತಿದ್ದಾರೆ. ಸಲ್ವಜುಡುಂ, ಸೇಂದ್ರದಂತಹ ಫ್ಯಾಸಿಸ್ಟ್ ಸಂಘಟನೆಗಳನ್ನು ಬೆಳೆಸುತ್ತಾ ಜನರ ಮೇಲೆ ದಾಳಿಗಳನ್ನು ಸಂಘಟಿಸಲಾಗುತ್ತಿದೆ. ಎಲ್ಲಾ ಚುನಾವಣಾ ರಾಜಕೀಯ ಪಕ್ಷಗಳು ನೇರ ಇಲ್ಲವೇ ಪರೋಕ್ಷವಾಗಿ ಫ್ಯಾಸಿಸಂಅನ್ನು ಪೋಷಿಸುತ್ತಿದ್ದಾರೆ. ಸಿಪಿಎಂ ನೇತೃತ್ವದ ಸರ್ಕಾರವಿರುವ ಪಶ್ಚಿಮ ಬಂಗಾಳದ ನಂದಿಗ್ರಾಮ, ಸಿಂಗೂರ್, ಕಾಂಗ್ರೆಸ್ ಸರಕಾರವಿರುವ ಆಂಧ್ರ ಪ್ರದೇಶದ ಮುದಿಗೊಂಡ, ಬಿಜೆಪಿ ಆಡಳಿತವಿರುವ ಗುಜರಾತ್‌ನ ಗೋದ್ರಾ, ಜಾತ್ಯಾತೀತ ಜನತಾದಳದ ನೇತೃತ್ವದಲ್ಲಿ ಎಚ್.ಡಿ. ಕುಮಾರಸ್ವಾಮಿ ಸರ್ಕಾರದ ಸಮಯದಲ್ಲಿನ ಮೆಣಸಿನಹಾಡ್ಯ, ಶಿವಾಜಿನಗರ, ಮಂಗಳೂರು ಗಲಭೆಗಳು ..... ಹೀಗೆ ಫ್ಯಾಸಿಸ್ಟ್ ದಾಳಿಗಳು ಹೆಚ್ಚಾಗುತ್ತಿವೆ. ಭಜರಂಗದಳ, ಶ್ರೀರಾಮ ಸೇನೆಗಳಂತಹ ಹಿಂದೂ ಫ್ಯಾಸಿಸ್ಟ್ ಸಂಘಟನೆಗಳನ್ನು ಬೆಳೆಸಲಾಗುತ್ತಿದೆ.**

**ಈ ರೀತಿಯ ದೊಡ್ಡ ಭೂಮಾಲೀಕರು, ದಲ್ಲಾಳಿ ಅಧಿಕಾರಶಾಹಿ ಬಂಡವಾಳಶಾಹಿಗಳು ತಮ್ಮ ರಾಜಕೀಯಾಧಿಕಾರ ಚಲಾಯಿಸಲು ಚುನಾವಣಾ ರಾಜಕೀಯ ಪಕ್ಷಗಳನ್ನು ಸಾಕಿಕೊಂಡಿದ್ದಾರೆ. ಆಳುವ ವರ್ಗಗಳ ಸಾಕುನಾಯಿಗಳಾದ ಚುನಾವಣಾ ರಾಜಕೀಯ ಪಕ್ಷಗಳಲ್ಲಿ ಯಾವುದಾದರೊಂದನ್ನು ಇಲ್ಲವೆ ಅವುಗಳಲ್ಲಿ ಕೆಲವನ್ನು ಆರಿಸಬೇಕಾದ ಈ ಕೊಳೆತ ವ್ಯವಸ್ಥೆಯ ಅನಿವಾರ್ಯ ಸಂದರ್ಭವೇ ಚುನಾವಣಾ ನಾಟಕಗಳು.**

**ಇದೇ ಕಳೆದ 60 ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಭಾರತದ 'ಮಹಾನ್' ಪ್ರಜಾಪ್ರಭುತ್ವದ 'ಪ್ರಜಾತಾಂತ್ರಿಕ' ಪ್ರಕ್ರಿಯೆಗಳು.**

**ಇದು ಬ್ರಿಟಿಷರು ಹೊರಹೋಗಿ 60 ವರ್ಷಗಳ ಪರಿಸ್ಥಿತಿಯಾಗಿರುವಾಗ ಎಲ್ಲಿರಲು ಸಾಧ್ಯ ಸ್ವಾತಂತ್ರ್ಯ? ಹೇಗಿರಲು ಸಾಧ್ಯ ಸ್ವಾಯತ್ತತೆ? ಪ್ರಜಾಪ್ರಭುತ್ವಕ್ಕೆ ಎಲ್ಲಿದೆ ಅವಕಾಶ? ದೇಶ ಗಣರಾಜ್ಯ ಹೇಗಾಗುತ್ತದೆ? ಜನತೆಯ ಓಟಿಗೆ ಯಾವ ಬೆಲೆ ಸಿಗುತ್ತದೆ?**

ಇದೆಲ್ಲವನ್ನು ನೋಡಿಯೂ

- 'ಕೋಮುವಾದಿ ಬಿಜೆಪಿಯನ್ನು ಸೋಲಿಸಿ, ಜನತೆಯ ಪ್ರಜಾತಾಂತ್ರಿಕ ಬೇಡಿಕೆಗಳ ಜಾರಿಗಾಗಿ ಒತ್ತಾಯಿಸಿ' ಎಂದು ಹೇಳಿ ಬಿಜೆಪಿ ಮಾತ್ರ ಕೋಮುವಾದಿ ಎಂಬಂತೆ ಚಿತ್ರಿಸುವುದು, ಇತರ ಪಕ್ಷಗಳು ಪ್ರಜಾತಾಂತ್ರಿಕವಾದವುಗಳು ಎಂಬಂತೆ ಭ್ರಮೆ ಮೂಡಿಸುವುದು,
- ಭಾರತದ ಮತದಾನದ 'ಹಕ್ಕಿನ' ಬಗ್ಗೆ?! ಅದರ 'ಪವಿತ್ರತೆ'ಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ಮಾಡುವುದು,
- 'ಮತ ಹಾಕದಿರುವುದು ಅಪರಾಧ' ಎನ್ನುವುದು, 'ಯೋಗ್ಯ ವ್ಯಕ್ತಿಗಳಿಗೆ ಮತ ನೀಡಿ' ಎನ್ನುವುದು,
- 'ಮತ ನೀಡದಿದ್ದರೆ ಸಮಾಜದ್ರೋಹ ಎನ್ನುವುದು,
- 'ಭಾರತದಲ್ಲಿ ಪ್ರಜಾಪ್ರಭುತ್ವ ಇದೆ ಅದನ್ನು ಉಳಿಸಿ ಬೆಳೆಸಲು ಮತದಾನ ಮಾಡಬೇಕು' ಎನ್ನುವುದು,
- 'ಮತದಾನ ಬಹಿಷ್ಕಾರ ದೇಶದ್ರೋಹ ಅಥವಾ ಪ್ರಜಾಪ್ರಭುತ್ವ ವಿರೋಧಿ' ಎನ್ನುವುದು .......

ಹೀಗೆಲ್ಲಾ ಮಾಡಿದರೆ ಕೊಳೆತು ಗಬ್ಬೆದ್ದಿರುವ ಈ ವ್ಯವಸ್ಥೆ, ಅದಕ್ಕೆ ಕಾರಣರಾಗಿರುವ ಕ್ರೂರ ಶೋಷಕ ಆಳುವ ವರ್ಗಗಳು ಮತ್ತು ಪ್ರಪಂಚದ ಲೂಟಿಕೋರ ಸಾಮ್ರಾಜ್ಯಶಾಹಿಗಳಿಗೆ ಬೆಂಬಲಿಸಿ ಅನುಕೂಲ ಮಾಡಿದಂತಲ್ಲವೆ? ಹಾಗೆ ಮಾಡಿ ಜನಸಾಮಾನ್ಯರನ್ನು ಈ ಪೊಳ್ಳು ಪ್ರಜಾಪ್ರಭುತ್ವದ ಬಗ್ಗೆ, ಕಪಟ ಚುನಾವಣೆಗಳ ಬಗ್ಗೆ ಭ್ರಮೆಯಲ್ಲಿಡುತ್ತಾ ಅವರನ್ನು ನಿಜವಾದ ಪ್ರಜಾತಾಂತ್ರಿಕ ವ್ಯವಸ್ಥೆ, ನಿಜವಾದ ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಾಗಿನ ಹೋರಾಟಕ್ಕೆ ತಣ್ಣೀರೆರಚಿದಂತೆ ಆಗುವುದಿಲ್ಲವೆ? ಸಾಮಾಜಿಕ ಬದಲಾವಣೆಯತ್ತ ಹೋಗದೆ ಕೊನೆಯುಸಿರಿನತ್ತ ಸಾಗುತ್ತಿರುವ ಅರೆ ಊಳಿಗಮಾನ್ಯ ಅರೆ ವಸಾಹತು ಸಾಮಾಜಿಕ ವ್ಯವಸ್ಥೆಗೆ ಆಮ್ಲಜನಕ ನೀಡುವ ವ್ಯರ್ಥ ಪ್ರಯತ್ನ ಆಗುವುದಿಲ್ಲವೆ? ಸಮಾಜದ ಮುಂಚಲನೆಯನ್ನು ತಡೆಯುವ ಇಲ್ಲವೇ ನಿಧಾನಗೊಳಿಸುವ ಕೆಲಸವಲ್ಲವೇ?

ವಿಷಾದನೀಯವೆಂದರೆ ಕರ್ನಾಟಕದ ಕೆಲವು ಬುದ್ಧಿಜೀವಿಗಳು ಹಾಗೂ ಕೆಲವು ಸಂಘಟನೆಗಳು ಇಂತಹ ವಿಚಾರಗಳನ್ನು ಪ್ರತಿಪಾದಿಸುತ್ತಿದ್ದಾರೆ.

ಭಾರತದ ನವ ಪ್ರಜಾಸತ್ತಾತ್ಮಕ ಕ್ರಾಂತಿಗಾಗಿ ದುಡಿಯುತ್ತಿರುವ ನಮ್ಮ ಪಕ್ಷ ಈ ಕಪಟ ಚುನಾವಣೆಯನ್ನು ಬಹಿಷ್ಕರಿಸುತ್ತದೆ. ಕರ್ನಾಟಕದ ಜನತೆ ಕಳ್ಳರ ಕೂಟಗಳ ಲೂಟಿಯ ಮುಂದುವರಿಕೆಗಾಗಿ ನಡೆಯುತ್ತಿರುವ ಈ ಚುನಾವಣೆಯನ್ನು ಬಹಿಷ್ಕರಿಸಿ ತಮ್ಮ ಬದುಕಿನ ಮತ್ತು ನಾಡಿನ ಮೂಲಭೂತ ಬದಲಾವಣೆಗಾಗಿ ಒಗ್ಗೂಡಿ ಸಮರಶೀಲ ಹೋರಾಟಗಳಲ್ಲಿ ತೊಡಗಲು ಕೇಳಿಕೊಳ್ಳುತ್ತಿದ್ದೇವೆ. ಭಾರತದಾದ್ಯಂತ ಬೆಳೆಯುತ್ತಿರುವ ಕ್ರಾಂತಿಕಾರಿ ಸಶಸ್ತ್ರ ಹೋರಾಟವನ್ನು ಬೆಂಬಲಿಸಬೇಕೆಂದು ಕೋರುತ್ತಿದ್ದೇವೆ.

ಮಲೆನಾಡು ಕರಾವಳಿಗಳಲ್ಲಿ ಬೆಳೆದುಬರುತ್ತಿರುವ ಕ್ರಾಂತಿಕಾರಿ ಸಶಸ್ತ್ರ ಹೋರಾಟವನ್ನು ಬಲಿಷ್ಠಗೊಳಿಸಲು ಸಾಧ್ಯವಾಗುವ ಎಲ್ಲಾ ರೀತಿಗಳಲ್ಲಿ ಕೈಜೋಡಿಸಲು ಈ ಮೂಲಕ ಮನವಿ ಮಾಡುತ್ತಿದ್ದೇವೆ.

★ ಕಳ್ಳ ಚುನಾವಣಾ ಪಕ್ಷಗಳು ಮತ್ತು ಅವುಗಳ ನಾಯಕರುಗಳನ್ನು ಬಯಲಿಗೆಳೆಯೋಣ!

★ ಕಪಟ ಚುನಾವಣೆಗಳನ್ನು ಬಹಿಷ್ಕರಿಸೋಣ!

★ ಸಮರಶೀಲ ರಾಜಿರಹಿತ ಐಕ್ಯ ಹೋರಾಟಗಳನ್ನು ಮುನ್ನಡೆಸೋಣ!

★ ನವ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಯಶಸ್ವಿಗೊಳಿಸೋಣ!

★ ಜನತೆಯ ಪ್ರಜಾಸತ್ತಾತ್ಮಕ ರಾಜಕೀಯ ಅಧಿಕಾರ ಸ್ಥಾಪಿಸೋಣ!

ಕ್ರಾಂತಿಕಾರಿ ವಂದನೆಗಳೊಂದಿಗೆ,

ಗಂಗಾಧರ
ರಾಜ್ಯ ಸಮಿತಿ ಪರವಾಗಿ
ಸಿಪಿಐ (ಮಾವೋವಾದಿ)
ಕರ್ನಾಟಕ

16 ಏಪ್ರಿಲ್, 2008